

ಇರೋದರಿಂದ ಬದುಕುವುದು ಅರ್ಥಪೂರ್ಣವಾಗಿದೆ. ಇಲ್ಲದಿದ್ದಲ್ಲಿ ನನ್ನ ಡಿಪ್ರೆಶನ್ ನನ್ನನ್ನ ಪೂರ್ತ ಮುಳುಗಿಸಿಬಿಡುತ್ತಿತ್ತು. ನೀವು ಬಂದು ಭೇಟಿ ಮಾಡಿದಿರಿ. ತುಂಬ ಸಂತೋಷವಾಯಿತು. -ನಿಮ್ಮ ತಿರುಮಲೇಶ್.''

ಮರುದಿನವೇ ಅವರು ಇನ್ನೊಂದು ಪತ್ರ ಬರೆದಿದ್ದರು:

''...ಲಂಕೇಶ್ ಪತ್ರಿಕೆ ಬಂತು. ಈ ಕುರಿತು ಇನ್ನು ನೀವು ಯಾವುದೇ ಶ್ರಮ ಕೈಗೊಳ್ಳಬೇಕಾಗಿಲ್ಲ - ಥ್ಯಾಂಕ್ಸ್, ಇಷ್ಟು ತಿಳಿಸೋದಕ್ಕೆ ಈ ಕಾಗದ. ನಾನು ಈಚೀಚೆಗೆ ಎರಡೆರಡು ಕಾಗದಗಳನ್ನು ಬರೆಯಬೇಕಾಗಿ ಬರುತ್ತಿರೋದನ್ನ ಗಮನಿಸಿದ್ದೇನೆ. (ಮೊನ್ನೆ ವಿದೇಶದವರೊಬ್ಬರಿಗೆ ನಮ್ಮ ಫ್ಯಾಕ್ಸ್ ನಂ. ಕಳಿಸಿದೆ. ಅದರಲ್ಲಿ ಒಂದು ಸೊನ್ನೆ ಸೇರಿಸಿಲ್ಲವೆಂದು ಗೊತ್ತಾಗಿ ಮತ್ತೆ ಬರೆಯಬೇಕಾಗಿ ಬಂದಿದೆ!) ಈ ಎಲ್ಲ ಹಗರಣಕ್ಕೂ ಅಕ್ಷರ ಜ್ಞಾನವೇ ಮೂಲಕಾರಣವೆಂದು ಗೊತ್ತು.

ಗುಹಾಮಾನವ-ಗುಹೇಶ್ವರನಾಗಿದ್ದಿದ್ದರೆ! ಆವಾಗಲೂ ಚಿತ್ರ ಬಿಡಿಸುವ ಹುಚ್ಚು ನಮ್ಮಂಥವರಿಗೆ ಅಂಟಿಕೊಳ್ಳದೆ ಇರುತ್ಯೆ? ಬಿಡಿಸಿದ ಮೇಲೆ ನಾಲ್ಕು ಮಂದಿಗೆ ಹೇಳಿ ತಂದು ತೋರಿಸಬೇಕು. ಅಷ್ಟರಲ್ಲಿ ಹುಲಿಗಳು ಬಂದು ನಮ್ಮನ್ನು ಅಲ್ಲಿಂದ ಓಡಿಸ್ತವೆ. ನಂತರದ ಮಾತುಕತೆ:

'ಇಂತಿಂಥ ಗುಹೆಯಲ್ಲಿ ನಾನು ಬಿಡಿಸಿದ ಚಿತ್ರವಿದೆ - ನೋಡಿದಿರ?'

'ಇಲ್ವಲ್ಲ!'

'ಹೋಗಿ ನೋಡಿ. ಆದರೆ, ರಾತ್ರಿ ಹೊತ್ತು ಹೋಗಿ. ಹಗಲಲ್ಲಿ ಹುಲಿಯಿರುತ್ತೆ. ದೀಪ ಬೇಕಾಗುತ್ತೆ.'

'ದೀಪ ಇದ್ದರೆ ಕೊಡಿ ಸ್ವಲ್ಪ.'

ದೀಪ ಕೊಡುತ್ತೇವೆ. ಅವರು ಹೋಗಿ ಚಿತ್ರ ನೋಡ್ತಾರೆಯೇ? ಹುಲಿಗೆ ತಲೆನೋವು ಬಂದು ರಾತ್ರಿ ಗುಹೆಯಲ್ಲೇ ರೆಸ್ಟ್ ತಗೊಳ್ತಿದ್ದರೆ? ದೀಪವಂತೂ ವಾಪಸು ಸಿಗಲ್ಲ! ನಿಮ್ಮ ತಿರುಮಲೇಶ್.''

ಮೇಲಿನ ಎರಡೂ ಪತ್ರಗಳಲ್ಲಿ ವಿಷಾದ, ಆತಂಕ, ಕರ್ನಾಟಕದ ಮಿತ್ರರಿಂದ ಅತ್ಯಲ್ಪ ಪ್ರಮಾಣದ ನಿರೀಕ್ಷೆ, ಅಕ್ಷರ ಜ್ಞಾನದ ಹಗರಣ, ಗುಹಾಮಾನವನಿಗೂ ಇರುವ ಸೃಜನಶೀಲತೆಯ ಹುಚ್ಚು, ಇವೆಲ್ಲವನ್ನೂ ಸೂಚಿಸುತ್ತ ಹುಲಿಯ ಕಥೆ ಹೇಳಿದ್ದಾರೆ. ದೀಪ ವಾಪಸು ಸಿಗದಿರುವ ರೂಪಕವೊಂದನ್ನು ಹಚ್ಚಿಟ್ಟಿದ್ದಾರೆ!

ಕಣ್ಣಿಗೆ ಕಾಣಿಸದಿದ್ದರೆ ಮನಸ್ಸಿಗೂ ದೂರ ಎಂಬ ಮಾತಿಗೆ ತಿರುಮಲೇಶ್ ಸಾಕ್ಷಿ. ಕರ್ನಾಟಕದ ಎಲ್ಲಿಯಾದರೂ ಒಂದುಕಡೆ ಕೆಲಸ ಮಾಡಬೇಕೆಂಬ ಆಸೆ ಅವರಿಗಿತ್ತು. ಕನ್ನಡ ವಿಶ್ವವಿದ್ಯಾಲಯವನ್ನೂ ಒಳಗೊಂಡಂತೆ ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯ ಅವರನ್ನು ಸುಲಭವಾಗಿ ಆಹ್ವಾನಿಸಬಹುದಿತ್ತು. ಅವರ ನಿಧನದ ಸುದ್ದಿ ತಿಳಿದು ಭಾರತೀಯ ಭಾಷಾ ಸಂಸ್ಥಾನದ ಮಾಜಿ ನಿರ್ದೇಶಕ, ಶಾಂತಿನಿಕೇತನದ ಮಾಜಿ ವೈಸ್ ಛಾನ್ಸಲರ್ ಹಾಗೂ ಪ್ರಸಿದ್ಧ ಸೈದ್ಧಾಂತಿಕ ಭಾಷಾಶಾಸ್ತ್ರಜ್ಞ ಪ್ರೊ. ಉದಯ್ ನಾರಾಯಣ್ ಸಿಂಗ್, 'ತಿರುಮಲೇಶ್ ಭಾರತದ ಸೈದ್ಧಾಂತಿಕ ಭಾಷಾಶಾಸ್ತ್ರ ಮತ್ತು ಭಾಷಾಂತರಶಾಸ್ತ್ರದ ಅತ್ಯಂತ ಮಹತ್ವದ ವಿದ್ವಾಂಸರಾಗಿದ್ದರು' ಎಂಬ ಸಂದೇಶವನ್ನು ನನಗೆ ವಾಟ್ಸಾಪ್ ಮೂಲಕ ಕಳಿಸಿದಾಗ, ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್‌ಗಳು, ನಾಡೋಜ, ಪಂಪ, ನೃಪತುಂಗ ಇತ್ಯಾದಿ ಗೌರವಗಳು ಅಪಹಾಸ್ಯ ಮಾಡಿದಂತೆ